ಯು.ಐ.ಡಿ.ಎಸ್.ಎಸ್.ಎಂ.ಟಿ. ಕಾಮಗಾರಿಗಳು			
1	Upgradation of existing Guttu Road and Beach road and construction of slab culverts Mulki Town Panchayath Mulki, Mangalore Taluk D.K. District	-	18,00,000.00
2	Upgradation to existing Chandra Shanubhagara Kudru Road Town Panchayath Mulki Mangalore Taluk D.K. District	-	18,00,000.00
3	Upgradation to existing Kamadu Sadashiva Nagara long and cross road Mulki Town Panchayath Mulki, Mangalore Taluk D.K. District	-	99,90,000.00
4	Upgradation to existing Chitrapu Gajani Road Mulki Town Panchayath Mulki, Mangalore Taluk D.K. District	-	23,50,000.00
5	Upgradation of existing Chetana Nursing Home to TP boundary Via Kempugudde (from By-pass) Mulki Town Panchayath Mulki, Mangalore Taluk D.K. District	-	40,50,000.00
6	Improvement of Kamadu Padubail Road Mulki Town Panchayath Mulki, Mangalore Taluk D.K. District	-	14,08,000.00

93 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕಿನ ಗುಡ್ಡಗಾಡು ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಜಿಂಕೆವನವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಜಿಂಕೆವನವನ್ನು ನಿರ್ಮಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಆ ಭಾಗದಲ್ಲಿ ಜಿಂಕೆ ವನವಿಲ್ಲದೆ ರೈತರ ಬೆಳೆಗಳಿಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ರೈತರ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರವು ಕೈಗೊಡ ಕ್ರಮಗಳೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅವರು ಇದರ ಸಾಧ್ಯ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿರುವರು ಮತ್ತು ಕೇಂದ್ರ ಮೃಗಾಲಯ ಪ್ರಾಧಿಕಾರದ ಅನುಮೋದನೆಯನ್ನು ಪಡೆದುಕೊಳ್ಳಲಾಗುವುದು.

ಇ) ಕಾಡಿನಲ್ಲಿ ಇರುವ ಎಲ್ಲಾ ಜಿಂಕೆಗಳನ್ನು ಮೃಗಾಲಯದಲ್ಲಿ ಬಂಧಿಸಿಡಲು ಸಾಧ್ಯವಿಲ್ಲ, ಆದಾಗ್ಯೂ ರೈತರಿಗೆ ಬೆಳೆನಾಶಕ್ಕೆ ಪರಿಹಾರವನ್ನು ನೀಡಲಾಗುತ್ತಿದೆ.

ಈ) ವನ್ಯಪ್ರಾಣಿಗಳಿಂದ ಉಂಟಾಗುವ ಬೆಳೆ ನಾಶಕ್ಕೆ ಸರ್ಕಾರವು ದಯಾತ್ಮಕ ಪರಿಹಾರವನ್ನು ನೀಡುತ್ತಿದೆ. ಈ ಹಿಂದೆ ನೀಡುತ್ತಿದ್ದ, ದಯಾತ್ಮಕ ಪರಿಹಾರದ ಮೊತ್ತವನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008 ದಿನಾಂಕ: 05/06/2009ರಲ್ಲಿ 3 ರಿಂದ 4 ಪಟ್ಟು ಹೆಚ್ಚಿಸಿ ಪರಿಷ್ಕರಿಸಿ ಆದೇಶಿಸಿದೆ.

* * *